# ಶರಧಿ ಸಡ್ಡಿಯ ಮಾಡಿ ಧರೆಯ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 181.
2. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 120.
3. **Note:** This song is not available in the books of Sri. Pavanje Guru Rao and also in the books of Prof. S.K. Ramachandra Rao and also in the books of Gorebala Hanumantha Rayaru.

ಶರಧಿ ಸಡ್ಡಿಯ ಮಾಡಿ ಧರೆಯ ಕೂರಿಗೆ ಮಾಡಿ

ಹರ–ಬೊಮ್ಮರೆಂಬ ಎರಡೆತ್ತು ಹೂಡಿ

ನರ–ಜೀವರಾಶಿಗಳೆಂಬ ಬೀಜವ ತಕ್ಕೊಂಡು

ಧರೆಯಲ್ಲಿ ಬಿತ್ತುವಾತ ಇಂದ್ರನು, ಬೆಳೆಸುವಾತ ಚಂದ್ರನು

ಕಳೆಯ ಕೀಳುವನು ಯಮರಾಜನಯ್ಯ

ಬಿತ್ತಿದಾತನೆ ಬೆಳೆಯನು ಒಕ್ಕಿಕೊಂಡು ಹೋಗುವಾಗ

ದುಃಖವೇತಕೆ ಸಿರಿ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ನಿಜವಾದ ಭಕ್ತ ಸಾವಿಗೆ ದುಃಖಿಸಬಾರದೆಂಬುದನ್ನು ಈ ಉಗಾಭೋಗದಲ್ಲಿ ಒಂದು ರೂಪಕ ಸಂಕೇತದಿಂದ ವಿವರಿಸಲಾಗಿದೆ.

**ಸಡ್ಡಿ** = ಬಿತ್ತುವ ಸಾಧನ

**ಬಿತ್ತಿದಾತ** = ಇಂದ್ರನು ಬಿತ್ತಿದಾತನೆಂದು ಇಲ್ಲಿ ಹೇಳಿದರೂ ನಿಜವಾಗಿ ಶ್ರೀಹರಿಯೇ ಬಿತ್ತುವುದಕ್ಕೆ ಮೂಲ ಪ್ರೇರಕನು.

**Classification:** Ugabhoga
**Ankita:** purandara vittala
**Location:** NA
**Category:** Mahatmya Jnana
**Sub-Category:** Samudra, bhumi, shiva, brahma, hasu, dana, nara, jiva, indra, Chandra, dukha,
**Pravachana:** NA
**Explanation:** NA